

‘‘ಸೊಸೈಟಿಯವರು ನಿಮ್ಮನ್ನು ಕರೆದಿದ್ದಾರೆ, ಕಂಪ್ಲೇಂಟಿದೆ. ಸಂಜೆ ಐದುಗಂಟೆಗೆ ಬರಬೇಕಂತೆ’’ ಎಂದು ಸೆಕ್ಯುರಿಟಿ ಹುಡುಗ ಬಂದು ಹೇಳಿದಾಗ ಜೀಕೆ ತನ್ನ ಮೇಲಿನ ಹೊಸ ಕಂಪ್ಲೇಂಟು ಏನಿರಬಹುದು ಎಂದು ಆಲೋಚಿಸಿದರು. ಇತ್ತೀಚೆಗೆ ಯಾರಲ್ಲೂ ಜಗಳವಾಗಿರಲಿಲ್ಲ. ಜಗಳವಾಡುವುದು ಬಿಟ್ಟು ಯಾರಲ್ಲೂ ಮಾತನಾಡುವುದಕ್ಕೇ ಮನಸ್ಸಿರಲಿಲ್ಲ. ಗಂಡನ ಮನೆಯಲ್ಲಿ ನರಕ ಅನುಭವಿಸುತ್ತಿದ್ದ ಮಗಳನ್ನು ಹೋಗಿ ಕರೆದು ತಂದಿದ್ದರು. ಆಕೆಯ ಸಮಸ್ಯೆಯ ಬಗ್ಗೆ ಅವಳಲ್ಲಿ ದೀರ್ಘವಾಗಿ ಸಮಾಲೋಚಿಸಿದ್ದರು. ‘‘ನನಗೆ ಈ ಸಂಬಂಧವೇ ಬೇಡ’’ ಎಂದು ಹಟ ಹಿಡಿದ ಮಗಳ ಜಿದ್ದಿಗೆ ಸೋತು ಗಂಡ ಕಾರ್ತಿಗೆ ಡೈವೋರ್ಸ್ ನೋಟಿಸು ಕೊಡಿಸಿದ್ದರು. ಡೈವೋರ್ಸ್ ಯಾಕೆ ಎಂದು ಕೇಳಿದ ಕಾರ್ತಿಗೆ, ‘‘ಒಳ್ಳೆಯ ಹೆಣ್ಣೊಬ್ಬಳನ್ನು ಹೆಂಡತಿಯಾಗಿ ಇಟ್ಟುಕೊಳ್ಳುವ ಯೋಗ್ಯತೆ ನಿನಗಿಲ್ಲ’’ ಎಂದು ಛೀಮಾರಿ ಹಾಕಿದ್ದರು.

